# ಗುರುದೇವ



ಇಂದು ರವಿತಾರೆ ಹಿಮಗಿರಿ ಗಂಗೆ ಗೋದಾ ಸಿಂಧು ಶುಭ ಜಲ ನಿಧಿಗಳೆಲ್ಲವು
ಚಂದದಲಿ ಮೆರೆವನ್ನೆಗಂ ಬಂದ "ಶ್ರೀ ಗುರುದೇವ" ಪೊರೆಯಲಿ ಶಿಷ್ಯ ಬಳಗವನು

ಧಾರ್ಮಿಕ ಮಾಸಿಕ ಪತ್ರಿಕೆ

ಶ್ರೀ ಹೊಂಬುಜ ಅತಿಶಯ ಮಹಾಕ್ಷೇತ್ರ ಶ್ರೀ ವೀರನಿರ್ವಾಣ ಶಕವರ್ಷ 2548 / ಶ್ರೀ ಶುಭಕೃತು ನಾಮ ಸಂವತ್ಸರ ಪುಟ : ೪ ಸಂಪುಟ : ೬೮ ಸಂಚಿಕೆ : ೧೦

15–07–2022 ಆಷಾಢ ಮಾಸ : ಕೃಷ್ಣ ಪಕ್ಷ ಶುಕ್ರವಾರ

RNI No. 13248/57-POSTEL REGD No. KA/SK/SMG 198/2021-23

ಪರಮ ಸಂರಕ್ಷಕರು, ಸ್ವಾಮಿತ್ವ, ಪ್ರಧಾನ ಸಂಪಾದಕರು : ಜಗದ್ಗುರು ಸ್ವಸ್ತಿಶ್ರೀ ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿಗಳವರು, ಶ್ರೀಕ್ಷೇತ್ರ ಹೊಂಬುಜ


ಶ್ರೀ ಕ್ಷೇತ್ರ ಹೊಂಬುಜ



ಭಗವಾನ್ ಶ್ರೀ ಪಾರ್ಶ್ವನಾಥ ಸ್ವಾಮಿ





ಜಗನ್ಮಾತೆ ಶ್ರೀ ಪದ್ಮಾವತಿ ದೇವಿ

ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ

## ದೇವೇಂದ್ರಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯ ಮಹಾಸ್ವಾಮಿಗಳವರು

ಶುಭಾಶೀರ್ವಚನ ಶ್ರೀ ಕ್ಷೇತ್ರ ಹೊಂಬುಜ

### "ಕಳೆದು ಹೋದ ದಿನ"

ಮನುಷ್ಯನ ಜೀವನದಲ್ಲಿ ಪ್ರತಿದಿನ ಒಂದಿಲ್ಲೊಂದು ಸಿಹಿ–ಕಹಿ ಘಟನೆಗಳು ನಡೆಯುತ್ತಿರುತ್ತವೆ. ಅದರಲ್ಲೂ ಕೆಲವು ಘಟನೆಗಳು ಮನಸ್ಸಲ್ಲಿ ಅಚ್ಚಳಿಯದೇ ಉಳಿಯುತ್ತವೆ. ಮನಸ್ಸಿಗೆ ಭಾರವಾಗಿ, ಸದಾ ಕೊರಗುವಂತೆ ಮಾಡುತ್ತವೆ. ನಮ್ಮ ಪೂರ್ವಾಚಾರ್ಯರು ಜೀವನವನ್ನು ಸುಗಮವಾಗಿ ನಡೆಸುವ ಕಲೆಯನ್ನು ಹೇಳಿಕೊಟ್ಟಿರುತ್ತಾರೆ. ಅದರಂತೆ ನಡೆದರೆ ಅವರಂತೆ ನಾವುಗಳು ಗುರಿ ತಲುಪುವುದು ಸುಲಭ.

ಒಂದೂರಲ್ಲಿ ಒಬ್ಬರು ಸಾಧುಗಳು ಪ್ರವಚನ ಮಾಡುತ್ತಿದ್ದರು. ಜೀವನದಲ್ಲಿ ಕೋಪದಿಂದಾಗುವ ಹಾನಿಯ ಬಗ್ಗೆ ಹೇಳುತ್ತಿದ್ದರು. ಕೋಪದಿಂದ ಬೇರೆಯವರನ್ನು ಸುಡುವುದರ ಜೊತೆಗೆ ತನ್ನನ್ನ ತಾ ಸುಟ್ಟುಕೊಳ್ಳುತ್ತಾನೆ. ಈ ಭೂಮಿಯಂತೆ ಕ್ಷಮೆ ಗುಣ ನಮ್ಮಲ್ಲಿ ಇದ್ದರೆ ಎಲ್ಲವನ್ನೂ ಸಾಧಿಸಬಹುದು ಎಂದು ಹೇಳುತ್ತಿದ್ದರು. ಇದೇ ಸಭೆಯಲ್ಲಿ ಒಬ್ಬ ಕೋಪಿಷ್ಠ ವ್ಯಕ್ತಿ ಅವರ ಮಾತುಗಳನ್ನು ಧಿಕ್ಕರಿಸಿ **"ನೀವುಗಳು ಹೇಳಿದ ರೀತಿಯಲ್ಲಿ ಇಂದಿನ ಪ್ರಪಂಚದಲ್ಲಿ ಬದುಕಲು ಸಾಧ್ಯವಿಲ್ಲ, ಇದೆಲ್ಲಾ ಉಪದೇಶಕ್ಕೆ ಮಾತ್ರ ಮಾತುಗಳು ಶೋಭೆ ತರುತ್ತವೆ"** ಎಂದೆಲ್ಲ ಚೀರಾಡುತ್ತಾನೆ. ಇದನ್ನೆಲ್ಲಾ ಸಾಧುಗಳು ಮೌನದಿಂದ ಕೇಳಿಸಿಕೊಳ್ಳುತ್ತಾರೆ. ಜನರು ದಿಗ್ಭ್ರಾಂತರಾಗುತ್ತಾರೆ. ಇಷ್ಟೆಲ್ಲಾ ಬೈದರು ಸಾಧುಗಳು ಏನು ಪ್ರತಿಕ್ರಿಯೆ ನೀಡದೇ ಇದ್ದದಕ್ಕೆ ಬಹಳ ಅಪಮಾನಮಾಡಿ ಮುಂದೆ ಹೋಗುತ್ತಾನೆ.

ಸ್ವಲ್ಪ ಸಮಯದ ನಂತರ ಆ ವ್ಯಕ್ತಿ ಕೋಪ ಶಾಂತವಾದ ಮೇಲೆ ಸಾಧುಗಳ ಜೊತೆ ತಾನು ಮಾಡಿದ ವ್ಯವಹಾರವನ್ನು ನೆನೆದು ಪರಿತಪಿಸುತ್ತಾನೆ. ತನ್ನ ಕೆಟ್ಟ ಬುದ್ಧಿಯನ್ನು ಶಪಿಸಿಕೊಳ್ಳುತ್ತಾನೆ. ಮರುದಿನ ಬೆಳಿಗ್ಗೆ ಸಾಧುಗಳನ್ನು ಹುಡುಕುತ್ತಾ ಹೋಗುತ್ತಾನೆ. ಹಿಂದಿನ ದಿನ ಪ್ರವಚನ ನಡೆದ ಸ್ಥಳದಲ್ಲಾಗಲೀ, ಬೇರೆಲ್ಲೂ ಅವರು ನೋಡಲು ಸಾಧುಗಳು ಸಿಗುವುದಿಲ್ಲ. ಅವನಿಗೆ ಬಹಳ ಚಿಂತೆಯಾಗುತ್ತದೆ. ಆಗ ದಾರಿ ಹೋಕರು **"ಸಾಧುಗಳ ನಿನ್ನೆಯೇ ಬೇರೆ ಪಕ್ಕದ ಊರಿಗೆ ಹೋದರೆಂದು"** ಅಲ್ಲಿ ಅವರ ಪ್ರವಚನ ಸಭೆ ನಡೆಯುತ್ತಿದೆ ಎಂದು ಹೇಳಿದರು. ಆತ ಅಲ್ಲಿಂದ ಸಾಧುಗಳು ಇದ್ದ ಊರಿಗೆ ಬಂದನು. ಪ್ರವಚನ ಮುಗಿಯುವವರೆಗೆ ಮೌನದಿಂದ ಇದ್ದು ನಂತರ ಜೋರಾಗಿ ಅಳುತ್ತಾ ಸಾಧುಗಳ ಬಳಿ ಕ್ಷಮೆಯಾಚಿಸತೊಡಗುತ್ತಾನೆ. ಅದಕ್ಕೆ ಸಾಧುಗಳು **"ನೀನು ಯಾರೆಂದು? ಯಾಕೆ ಕ್ಷಮೆ ಕೇಳುತ್ತಿರುವೆ"** ಎಂದು ಕೇಳುತ್ತಾರೆ. ಅವರ ಮಾತುಗಳನ್ನು ಕೇಳಿದ ಆತನಿಗೆ ಆಶ್ಚರ್ಯವಾಗುತ್ತದೆ ಹಾಗೂ ಹಿಂದಿನ ದಿನ ನಡೆದ ಘಟನೆಯನ್ನು ನೆನಪಿಸುತ್ತಾನೆ. ಆಗ ಸಾಧುಗಳು **"ನಿನ್ನೆ ನಡೆದ ಘಟನೆ ಅಥವಾ ಮಾತುಗಳನ್ನು ನೀನು ಇಂದು ನೆನೆದು ದುಃಖಪಡುತ್ತಿರುವೆ. ಆದರೆ ನಿನ್ನೆಯೆ ನಾನು ಆ ಕಟು ಮಾತುಗಳನ್ನು ಅಲ್ಲಿಯೇ ಬಿಟ್ಟು ಬಂದಿದ್ದೇನೆ. ಇಂದಿನ ಹೊಸ ವಿಚಾರದೊಂದಿಗೆ ಬದುಕು ಸಾಗಿಸುತ್ತಿದ್ದೇನೆ. ನಿನಗೆ ನಿನ್ನೆಯ ಮಾತುಗಳಿಂದ ಪಶ್ಚತಾಪವಾಗಿದೆ. ಅದಕ್ಕಿಂತ ದೊಡ್ಡ ಪಾಯಶ್ಚಿತ್ತವಿಲ್ಲ. ಹಾಗಾಗಿ ಅದನ್ನ ಮರೆತು ಮುಂದಿನ ಬದುಕು ಸುಧಾರಿಸಿಕೊಂಡು ನಡೆ"** ಎಂದರು.

ನಮ್ಮ ಜೀವನದಲ್ಲಿ ಹಿಂದಿನ ಕಹಿ ಘಟನೆಗಳನ್ನೆ ನೆನೆದು ದುಃಖಿಸುವುದಕ್ಕಿಂತ ಹೊಸದಾಗಿ ಉತ್ಸಾಹದೊಂದಿಗೆ ಮುಂದಿನ ದಿನಗಳನ್ನ ಸ್ವಾಗತಿಸುವ ಬಗ್ಗೆ ಕಲಿಯಬೇಕು. ಕ್ರೋಧವಾಗಲಿ, ಅಭಿಮಾನವಾಗಲಿ ಯಾವುದೇ ವಿಕೃತಿಗಳು ಮನುಷ್ಯನ ಅಭಿವೃದ್ಧಿಗೆ ಕಂಟಕವಾಗುತ್ತವೆ. ಸಾಧು–ಸಜ್ಜನರ ಸಂಗದಿಂದ ಉತ್ತಮ ನಡತೆ ನಮ್ಮದಾಗುತ್ತದೆ.

ಚಾತುರ್ಮಾಸದ ಈ ಶುಭ ಸಮಯದಲ್ಲಿ ಶ್ರಾವಕ ಸಮುದಾಯಕ್ಕೆ ಅಮೃತ ಘಳಿಗೆಯಂತೆ. ಸಮಯದ ಸದುಪಯೋಗದೊಂದಿಗೆ ಉತ್ತಮ ಭವಿಷ್ಯದ ಸೋಪಾನ ಏರುವ.

ಶುಭವಾಗಲಿ.

## ಮಹಾಪಟ್ಟಾಭಿಷೇಕ ಮಹೋತ್ಸವ

### "ಸಮತಾಭಾವನೆಯಿಂದ ಜೈನ ಧರ್ಮದ ಸೇವೆ ಮಾಡುವೆ"

–ಪರಮಪೂಜ್ಯ ಸ್ವಸ್ತಿಶ್ರೀ ಲಕ್ಷ್ಮೀಸೇನ ಭಟ್ಟಾರಕ ಮಹಾಸ್ವಾಮೀಜಿ



**ಕೊಲ್ಹಾಪುರ :** **'ಪ್ರಾಚೀನ ಐತಿಹಾಸಿಕ ಪರಂಪರೆಯ ಪೀಠವನ್ನು ಅಲಂಕರಿಸಿದ ನಾನು ಸೌಭಾಗ್ಯಶಾಲಿ. ಪಟ್ಟಾಭಿಷೇಕ ಮಹೋತ್ಸವದಿಂದ ನನ್ನ ಮರುಜನ್ಮವಾಗಿದೆ. ಶರೀರದಲ್ಲಿ ಶಕ್ತಿ ಇರುವವರೆಗೂ ನಾನು ಕಾರ್ಯದಕ್ಷತೆಯಿಂದ, ಸಮತಾ ಭಾವನೆಯಿಂದ ಜೈನ ಧರ್ಮ, ಸಮಾಜ ಸೇವೆಯನ್ನು ಮಾಡಲು ಸಿದ್ಧನಾಗಿದ್ದೇನೆ'** ಎಂದು ನೂತನ ಪರಮಪೂಜ್ಯ ಸ್ವಸ್ತಿಶ್ರೀ ಲಕ್ಷ್ಮೀಸೇನ ಭಟ್ಟಾರಕ ಮಹಾಸ್ವಾಮೀಜಿಗಳವರು ಕೊಲ್ಹಾಪುರ ಮಠಗಲ್ಲಿಯ ಸಂಸ್ಥಾನ ಮಠದ ಪೀಠವನ್ನಲಂಕರಿಸಿ ಮೊದಲ ಆಶೀರ್ವಚನ ನೀಡಿದರು.

ಇಲ್ಲಿಯ ಸುವರ್ಣಭೂಮಿ ಮಂಗಲಮಯ ವಾತಾವರಣದಲ್ಲಿ ದಿನಾಂಕ 15–06–2022 ರಿಂದ 26–06–2022ರವರೆಗೆ ನಡೆದ ಪಟ್ಟಾಭಿಷೇಕ ಕಾರ್ಯಕ್ರಮದಲ್ಲಿ ಆಶೀರ್ವಚನ ನೀಡಿದ ಅವರು ಜೈನ ಸಮಾಜದ ಯುವಕರಿಂದ ನಮ್ಮ ಸಂರಕ್ಷಣೆ, ವೃದ್ಧಿ ಆಗಬೇಕಿದೆ. ಅದ್ದರಿಂದ ಯುವಕರ ಸಂಘಟನೆಯನ್ನು ಮಾಡಿ ವೈಜ್ಞಾನಿಕವಾಗಿ ಸಂಶೋಧನೆ ಮಾಡಿ ಜೈನ ಧರ್ಮದ ತತ್ತ್ವಜ್ಞಾನ, ಸಂಸ್ಕಾರದವರೆಗೆ ತಲುಪಿಸುತ್ತೇನೆ. ಪೂರ್ವ ಭಟ್ಟಾರಕ ಸ್ವಾಮೀಜಿಗಳ ಮನಸ್ಸಿನ ಅನೇಕ ಸೇವಾಕಾರ್ಯಗಳನ್ನು ಪೂರ್ಣ ಮಾಡಲು ಸರ್ವ ಸಮಾಜದವರು ಜೊತೆಯಾಗಬೇಕೆಂದು ಕರೆ ನೀಡಿದರು.

2ನೇ ಪುಟಕ್ಕೆ

## 24 ತೀರ್ಥಂಕರ ಕೂಟ–ಚರಣ ಸ್ಥಾಪನೆ – ಭವನದ ಉದ್ಘಾಟನಾ ಕಾರ್ಯಕ್ರಮ

### "ಶಿಕ್ಷಣದಿಂದ ಸಮಾಜದ ಪ್ರಗತಿ–ಕ್ಷೇತ್ರದ ಬೆಳವಣಿಗೆ ಸಾಧ್ಯ"

– ಜಗದ್ಗುರು ಸ್ವಸ್ತಿಶ್ರೀ ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿಗಳವರು.



**ಗೌರಿಬಿದನೂರು :** ಶಿಕ್ಷಣದಿಂದ ಸಮಾಜ ಪ್ರಗತಿ ಹೊಂದಿ ಈ ಮೂಲಕ ಕ್ಷೇತ್ರದ ಬೆಳವಣಿಗೆ ಸಾಧ್ಯವಾಗಲಿ ಎಂದು ಹೊಂಬುಜ ಜೈನ ಮಠದ ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿಯವರು ಮಾತನಾಡಿದರು.

ಸಮೀಪದ ಮಂಚೇನಹಳ್ಳಿ ಬ್ರಹ್ಮಗಿರಿಯಲ್ಲಿ 24 ತೀರ್ಥಂಕರ ಕೂಟಗಳ ಹಾಗೂ ಚರಣ ಸ್ಥಾಪನೆ ಮತ್ತು ಗಣಧರಕೂಟ, ಶ್ರೀಕ್ಷೇತ್ರಪಾಲರ ಕೂಟ ಮತ್ತು ಮೂರ್ತಿ ಸ್ಥಾಪನಾ ಹಾಗೂ ಜೈನ ಶ್ರಾವಕರ ಉಪಹಾರ ಭವನದ ಉದ್ಘಾಟನಾ ಕಾರ್ಯಕ್ರಮದಲ್ಲಿ ಆಶೀರ್ವಚನ ನೀಡಿದರು.

ಧರ್ಮಕಾರ್ಯ, ಪೂಜೆ, ಜೀರ್ಣೋದ್ಧಾರ ಕಾರ್ಯಗಳ ಸಹಕಾರಕ್ಕೆ ಸಮಾಜ ನಡೆದುಕೊಳ್ಳುತ್ತಿದ್ದು, ಶಿಕ್ಷಣದಿಂದ ಸಮಾಜ ಪ್ರಗತಿ ಹೊಂದುತ್ತಿವೆ. ಇದರಿಂದ ಕ್ಷೇತ್ರದ ಬೆಳವಣಿಗೆಯೂ ಸಾಧ್ಯವಾಗಲಿದೆ. ಶ್ರವಣಬೆಳಗೊಳದ ಶ್ರೀ ಗೊಮ್ಮಟೇಶ್ವರ ಶಿಕ್ಷಣ ಸಂಸ್ಥೆ ಇದಕ್ಕೆ ಮಾದರಿಯಾಗಿದ್ದು ಇಲ್ಲಿ ಶಿಕ್ಷಣ ಪಡೆದವರು

2ನೇ ಪುಟಕ್ಕೆ

## ಮಹಾಪಟ್ಟಾಭಿಷೇಕ ಮಹೋತ್ಸವ

1ನೇ ಪುಟದಿಂದ



ಸಮಾರಂಭವು ಶ್ರೀಕ್ಷೇತ್ರ ಶ್ರವಣಬೆಳಗೊಳದ ಪರಮಪೂಜ್ಯ ಜಗದ್ಗುರು ಕರ್ಮಯೋಗಿ ಸ್ವಸ್ತಿಶ್ರೀ ಚಾರುಕೀರ್ತಿ ಭಟ್ಟಾರಕ ಮಹಾಸ್ವಾಮೀಜಿಗಳ ಪಾವನ ಸಾನಿಧ್ಯ ಹಾಗೂ ಸಕಲ ಜೈನ ಮಠಗಳ ಭಟ್ಟಾರಕ ಪಟ್ಟಾಚಾರ್ಯವರ್ಯ ಸ್ವಾಮೀಜಿಗಳ ಉಪಸ್ಥಿತಿಯಲ್ಲಿ ಅದ್ಧೂರಿಯಾಗಿ ನಡೆಯಿತು.

ದಿ. 15 ರಂದು ನಿತ್ಯ ಅಭಿಷೇಕ, ಶುದ್ಧಿ ಹೋಮ, ವಾಸ್ತುವಿಧಾನ, ನವಗ್ರಹಶಾಂತಿ ಆರಾಧನೆ, ದಿ. 16ರಂದು ನೂತನ ಸ್ವಾಮೀಜಿಯವರ ಪುರಪ್ರವೇಶ ಮತ್ತು ಜಿನವಂದನಾ, ಮಠಮಂದಿರದಲ್ಲಿ ಮಂಗಲ ಪ್ರವೇಶ, ದಿ. 17 ರಂದು ಪಂಚಪರಮೇಷ್ಠಿ ವಿಧಾನ, ದಿ. 18 ರಂದು 24 ತೀರ್ಥಂಕರರ ವಿಧಾನ, ದಿ. 19 ರಂದು ಶ್ರುತಸ್ಕಂಧ ವಿಧಾನ, ದಿ. 20 ರಂದು ಗಣಧರವಲಯ ವಿಧಾನ-ವಜ್ರಪಂಜರ ವಿಧಾನ, ದಿ. 21 ರಂದು ನೂತನ ಶ್ರೀಗಳ ಮಂಗಲಸ್ನಾನ, ಮಂಗಲ ಕಲಶಸ್ಥಾಪನಾ, ನವಕಲಶಾಭಿಷೇಕ, ಶಾಂತಿದಾರಾ, ಪಟ್ಟಾಭಿಷೇಕ ಪೂರ್ವವಿಧಿಗಳು ಮತ್ತು ಸಿಂಹಾಸನ ಪೂಜೆ, ಪ್ರಾತಃ 8.00 ರಿಂದ 8.21ರವರೆಗೆ ಕರ್ಕ ಲಗ್ನದಲ್ಲಿ ಸಿಂಹನವಾಂಶ ಮಂತ್ರ, ಶ್ರೀ ಲಕ್ಷ್ಮೀಸೇನ ಭಟ್ಟಾರಕ ಪಟ್ಟಾಚಾರ್ಯ ಮಹಾಸ್ವಾಮೀಜಿ ಸಂಸ್ಥಾನಮಠ ಕೊಲ್ಲಾಪುರ, ರಾಯಬಾಗ, ಹೋಸೂರ, ಬೆಳಗಾವಿ ಇವರ ವರ್ತಮಾನ ಕೊಲ್ಲಾಪುರ ಮಠದಲ್ಲಿ ಸಿಂಹಾಸನಾಧೀಶ್ವರ, ಸಿಂಹಸನಾಪೂರ್ವಕ ಪಟ್ಟಾಭಿಷೇಕ ಮಹೋತ್ಸವ, ಪಟ್ಟಮುದ್ರಿಕಾ, ಪರಂಪರಾಗತ ಪಿಂಛಿ, ಕಮಂಡಲ ಮತ್ತು ಮುದ್ರಿಕಾ ಸಮರ್ಪಣೆ, ಪಾದುಕಾ ಪುಜೆ, ನೂತನ ಸ್ವಾಮೀಜಿಯ ಪಾದಪ್ರಕ್ಷಾಲನ, ಪ್ರಶಸ್ತಿ ವಾಚನ, ಗೌರವ ಸಮರ್ಪಣೆ, ಆಶೀರ್ವಚನ, ಧರ್ಮೋಪದೇಶ, ಶ್ರೀಫಲ, ಮಂತ್ರಾಕ್ಷತೆ ಪೂರ್ವಕ ಶುಭಾಶೀರ್ವಾದ ಪ್ರದಾನ, ದಿ. 22 ರಂದು ಶ್ರೀ ಶಾಂತಿನಾಥ ವಿಧಾನ, ದಿ. 23 ರಂದು ಶ್ರೀ ಸಹಸ್ರನಾಮ ಅರ್ಘ್ಯಾವಲಿ, ದಿ. 24 ರಂದು ಅರವತ್ನಾಲ್ಕು ಋದ್ಧಿ ಮಂತ್ರ ವಿಧಾನ, ದಿ. 25 ರಂದು ಪೂರ್ವ ಭಟ್ಟಾರಕ ಪಟ್ಟಾಚಾರ್ಯರ ಗುಣಗೌರವಪೂರ್ವಕ ವಿನಯಾಂಜಲಿ, ದಿ. 26 ರಂದು 11 ಗಂಟೆಯಿಂದ ತ್ಯಾಗಿಗಳ ಪಾವನ ಸಾನಿಧ್ಯದಲ್ಲಿ ಸಕಲ ಜೈನ ಮಠಗಳ ಭಟ್ಟಾರಕ ಮಹಾಸ್ವಾಮೀಜಿಗಳ ದಿವ್ಯ ಉಪಸ್ಥಿತಿಯಲ್ಲಿ ಡಾ. ಡಿ. ವೀರೇಂದ್ರ ಹೆಗ್ಗಡೆಯವರ ಉಪಸ್ಥಿತಿಯಲ್ಲಿ, ಗಣಮಾನ್ಯ ವಿದ್ವಜ್ಜನರ ಸಮ್ಮುಖದಲ್ಲಿ, ಸಮಸ್ತ ಶ್ರಾವಕ-ಶ್ರಾವಿಕೆಯರ ಸಮಕ್ಷಮದಲ್ಲಿ ಪಟ್ಟಾಭಿಷೇಕ ಮಹೋತ್ಸವ ಸ್ವಾಗತ, ಅಭಿನಂದನಾ ಸಮಾರಂಭವು ನೆರವೇರಿತು.

ಈ ಎಲ್ಲಾ ಕಾರ್ಯಕ್ರಮವು ಶ್ರೀ ಲಕ್ಷ್ಮೀಸೇನ ಪಟ್ಟಾಭಿಷೇಕ ಮಹೋತ್ಸವ ಸಮಿತಿ ಕೊಲ್ಹಾಪುರ, ರಾಯಭಾಗ, ಹೊಸೂರ, ಬೆಳಗಾವಿ ಅಧ್ಯಕ್ಷರು, ಬೆಳಗಾವಿ ದಕ್ಷಿಣ ಶಾಸಕರಾದ ಶ್ರೀ ಅಭಯ ಭ. ಪಾಟೀಲ, ಕಾರ್ಯದರ್ಶಿಗಳಾದ ಬೆಳಗಾವಿ ಗ್ರಾಮೀಣ ಮಾಜಿ ಶಾಸಕರಾದ ಶ್ರೀ ಸಂಜಯ ಪಾಟೀಲ, ಕಾರ್ಯದಶೀ ಶ್ರೀ ಸುರೇಶ ರೋಟೆ ಪಟ್ಟಾಭಿಷೇಕ ಸಮಿತಿಯ ವತಿಯಿಂದ ಅದ್ಧೂರಿಯಾಗಿ ಆಯೋಜಿಸಲಾಗಿತ್ತು.

## 24 ತೀರ್ಥಂಕರ ಕೂಟ-ಚರಣ ಸ್ಥಾಪನೆ - ಭವನದ ಉದ್ಘಾಟನಾ ಕಾರ್ಯಕ್ರಮ

1ನೇ ಪುಟದಿಂದ

ಧರ್ಮದ ಏಳಿಗೆಗ ಶ್ರಮಿಸುತ್ತಿದ್ದಾರೆ. ಇದಕ್ಕೆ ಶುದ್ಧ ಹಾಗೂ ಸುಸಂಸ್ಕೃತ ಮನಸ್ಸು-ಭಾವನೆಗಳು ಅಗತ್ಯ. ಯಾವುದೇ ಕಾರ್ಯಕ್ಕೆ ಕ್ರಮಬದ್ಧವಾದ ಅಧ್ಯಯನ ಅಗತ್ಯ ಎಂದರು.

ಈ ಹಿಂದೆ ಕರ್ನಾಟಕದಲ್ಲಿ ಪ್ರಮುಖ ಸಾಗರ ಮುನಿಮಹಾರಾಜರು ಕರ್ನಾಟಕದಲ್ಲಿ ವಿಹಾರ ಮಾಡಿ ಕ್ಷೇತ್ರಗಳ ಅಭಿವೃದ್ಧಿಗೆ ಧರ್ಮಪ್ರಭಾವನೆ ಬೀರಿದರು. ಕರ್ನಾಟಕದಲ್ಲಿ ಯುಗಳ ಮುನಿಗಳು ಕಳೆದ 5 ವರ್ಷಗಳಿಂದ ಧರ್ಮಪ್ರಭಾವನೆಯ ಅವಕಾಶ ಸಿಕ್ಕಿದ್ದು ಯುಗಳ ಮುನಿಗಳ ಮಾರ್ಗದರ್ಶನದಲ್ಲಿ ಮಂಧರಗಿರಿಯಲ್ಲಿ ಸಮವಸರಣವಾಗುತ್ತಿದ್ದು ಇದು ದೇಶದಲ್ಲೇ ವಿಶಿಷ್ಟವಾದದ್ದು. ಅಲ್ಲದೇ ಹಲವು ಧಾರ್ಮಿಕ ಗೊಂದಲಗಳನ್ನು ಮುನಿಗಳು ಬಗೆಹರಿಸುತ್ತಿದ್ದಾರೆ. ಭರತ ಚಕ್ರವರ್ತಿ, ಭದ್ರಬಾಹುಮುನಿಗಳು, ಚಂದ್ರಗುಪ್ತಮೌರ್ಯರ ಕನಸುಗಳು ನನಸಾಗುತ್ತಿವೆ ಎಂದ ಅವರು ಇಂದು ಸಮಾಜ ವಾಟ್ಸಪ್-ಆನ್‌ಲೈನ್-ಮೊಬೈಲ್‌ನಿಂದ ಧಾರ್ಮಿಕ ಪದ್ಧತಿಗಳ ಮೌಲ್ಯ ಕುಸಿಯುತ್ತಿರುವ ಬಗ್ಗೆ ವಿಷಾಧಿಸಿದರು,

ಕಾರ್ಯಕ್ರಮ ಉದ್ಘಾಟಿಸಿದ ಅರಿಹಂತಗಿರಿ ಜೈನ ಮಠದ ಪರಮಪೂಜ್ಯ ಸ್ವಸ್ತಿಶ್ರೀ ಧವಳಕೀರ್ತಿ ಭಟ್ಟಾರಕ ಮಹಾಸ್ವಾಮೀಜಿಯವರು ಆಶೀರ್ವಚನ ನೀಡಿ, ಸಮಾಜಕ್ಕೆ ಕ್ಷೇತ್ರ ಹಾಗೂ ಸ್ವಾಮೀಜಿಗಳು ತಂದೆ-ತಾಯಿ ಇದ್ದಂತೆ. ಕ್ಷೇತ್ರದ ಅಭಿವೃದ್ಧಿಗೆ ತನು-ಮನ-ಧನಗಳಿಂದ ಸಮರ್ಪಿತರಾಗಬೇಕೆಂದರು.

ಯುಗಳ ಮುನಿಗಳಾದ ಮುನಿಶ್ರೀ ಅಮೋಘಕೀರ್ತಿ ಮಹಾರಾಜ್‌ರವರು ಹಾಗೂ ಮುನಿಶ್ರೀ ಅಮರಕೀರ್ತಿ ಮಹಾರಾಜ್‌ರವರು ಪಾವನ ಸಾನಿಧ್ಯ ವಹಿಸಿ ಆಶೀರ್ವಚನ ನೀಡಿದರು.

ಶ್ರೀ ಭಗವಾನ್ ಬಾಹುಬಲಿ ಸ್ವಾಮಿ ಟ್ರಸ್ಟ್ ಹಾಗೂ ಕೋಡಿ ಬ್ರಹ್ಮದೇವರ ಧರ್ಮಸಂಸ್ಥೆ ಅಧ್ಯಕ್ಷ ಕೆ.ಎನ್. ಅಶೋಕ ಕುಮಾರ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.

ಇದೇ ಸಂದರ್ಭದಲ್ಲಿ ದಾನಿಗಳಾದ ಪಂಕಜಮ್ಮ ಕುಟುಂಬ, ಶಾಂತಲಾ ಅಜಿತ್ ದಂಪತಿಗಳನ್ನು ಸನ್ಮಾನಿಸಲಾಯಿತು. ಎನ್.ಜೆ. ಸತ್ಯೇಂದ್ರ ಕುಮಾರ್ ಕಳಸ-ಅಭಿಷೇಕಗಳ ಹರಾಜು ಪ್ರಕ್ರಿಯೆ ನಡೆಸಿದರು.

ಕಾರ್ಯಕ್ರಮದಲ್ಲಿ ವಿವಿಧ ಬಸದಿಗಳ ಅಧ್ಯಕ್ಷರಾದ ಎ.ಎನ್. ರಾಜೇಂದ್ರ ಪ್ರಸಾದ್, ಪಿ. ನಾಗೇಂದ್ರ ಕುಮಾರ್, ಸುರೇಶ್, ಗೌರಿಬಿದನೂರು ಶ್ರೀ ಪದ್ಮಾವತಿ ಜೈನ ಮಹಿಳಾ ಟ್ರಸ್ಟ್ ಸೇರಿದಂತೆ ಇನ್ನಿತರ ಸಂಘಟನೆಗಳು ಭಾಗವಹಿಸಿದ್ದರು.

ಜೂನ್. 9 ರಿಂದ 12ರ ವರೆಗೆ ನಡೆದ ಧಾರ್ಮಿಕ ಕಾರ್ಯಕ್ರಮದಲ್ಲಿ ಧ್ವಜಾರೋಹಣ, ನಿತ್ಯವಿಧಿಪೂಜೆ, ಮಂಗಳಾರತಿ, ಅಭಿಷೇಕ, ಆರಾಧನೆ, ಷೋಡಶೋಪಚಾರ ಪೂಜೆಗಳು ನಡೆದವು. ಎನ್.ಜೆ. ಸತ್ಯೇಂದ್ರ ಕುಮಾರ್ ಸ್ವಾಗತಿಸಿ ಕಾರ್ಯಕ್ರಮ ನಿರೂಪಿಸಿ ವಂದಿಸಿದರು.

### ಜಿನ-ದನಿ

ದೇವಭತ್ತೋ ಸಯಾಯಾರೀ, ದಾಣೀ ಧೀರೋ ಗುಣಾಯರೋ ।
ಣಾಯಪ್ಪಿಯೋ ದಯಾಲೂ ಜೋ, ಣಿಬ್ಬಲಾ ಬಲ-ದಾಯಗೋ ॥ 13 ॥
ರಕ್ಖಗೋ ಸವ್ವ-ಸಾಹೂಣಂ, ಸಜ್ಜಣಾಣಂ ಚ ಗಾಹಗೋ ।
ಪಂಡಿದೋ ಖಲು ರಾಯಾ ಸೋ, ಧಮ್ಮೀಣಮುವಗಾರಗೋ ॥ 14 ॥

**ಅರ್ಥ:** ಪ್ರಭುವಿನ ಭಕ್ತ, ಸದಾಚಾರಿ, ದಾನಿ, ಧೀರ, ಗುಣಗಳ ಸಮುದ್ರ, ನಿತ್ಯವು ನಿರ್ಬಲರಿಗೆ ಬಲವನ್ನು ಪ್ರದಾನ ಮಾಡುವಂತವನು, ನ್ಯಾಯಪ್ರಿಯ, ದಯಾಳು, ಎಲ್ಲ ಸಾಧುಗಳ ರಕ್ಷಣೆಯನ್ನು ಮಾಡುವಂತಹವನು, ಸಜ್ಜನರುಗಳ ಪ್ರಿಯ, ಧರ್ಮವಂತರಿಗೆ ಅನುಗ್ರಹ ನೀಡುವಂತಹ ರಾಜನು ನಿಶ್ಚಯದಿಂದ ಪಂಡಿತ(ವಿದ್ವಾಂಸ) ಇರುತ್ತಾನೆ.



## ಜೀರ್ಣೋದ್ಧಾರ ಪ್ರಗತಿ

ಅತಿಶಯ ಕ್ಷೇತ್ರ ಹೊಂಬುಜದ ಜಗನ್ಮಾತೆ ಶ್ರೀ ಪದ್ಮಾವತಿ ಅಮ್ಮನವರ ಬಸದಿಯು ಜೀರ್ಣೋದ್ಧಾರ ಕೈಗೊಳ್ಳಲು ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿಯವರು ಕಾರ್ತೀಕ ಮಾಸದ ಶುಭದಿನ 19-11-2020ರಂದು ಭೂಮಿಪೂಜೆ ಮಾಡಲಾಗಿದ್ದು, ಪ್ರಸ್ತುತ ಜೀರ್ಣೋದ್ದಾರ ಕಾರ್ಯವು ಭರದಿಂದ ನಡೆಯುತ್ತಿದೆ.

ಅಮ್ಮನವರ ಗರ್ಭಗೃಹದಲ್ಲಿ ಎಂದಿನಂತೆ ಪುರೋಹಿತರಿಂದ ನಿತ್ಯ ಪೂಜೆಗಳು ನಡೆಯುತ್ತಿವೆ. ಭ. ಶ್ರೀ ಪಾರ್ಶ್ವನಾಥ ಸ್ವಾಮಿ ಬಸದಿಯಲ್ಲಿ ಎಲ್ಲಾ ಪೂಜೆ, ಆರಾಧನೆಗಳಿಗೆ ಅವಕಾಶ ಕಲ್ಪಿಸಲಾಗಿದೆ. ಪ್ರಸ್ತುತ ಬಸದಿ ಮುಂಭಾಗ ಚಂದ್ರಶಾಲೆಯ ನಿರ್ಮಾಣ ಕಾರ್ಯವು ಪ್ರಗತಿಯಲ್ಲಿದೆ. ಕ್ಷೇತ್ರದಲ್ಲಿ ನಡೆಯುತ್ತಿರುವ ಈ ಜೀರ್ಣೋದ್ಧಾರ ಕಾರ್ಯಕ್ಕೆ ಧರ್ಮಬಾಂಧವರು ಈ ಹಿಂದಿನಂತೆ ತನು-ಮನ-ಧನ ರೂಪದ ಸಹಕಾರ ನೀಡಬೇಕಾಗಿ ಅಪೇಕ್ಷಿಸುತ್ತೇವೆ.

For contact office : 08185-262722, 9481453653, 9449093540, 9481249127. For remittance by NEFT/RTGS : Sri Hombuja Jain Math, Humcha; SB A/c with Karnataka Bank Humcha Branch- A/c No : 3182500101025001 IFSC Code : KARB0000318

## ಬರಲಿರುವ ಪರ್ವದಿನಗಳು

ಶುಭಕೃತ್‌ನಾಮ ಸಂವತ್ಸರದ

ಆಷಾಢಮಾಸ ಕೃಷ್ಣಪಕ್ಷ ಪಂಚಮಿಯಿಂದ ಶ್ರಾವಣಮಾಸ ಕೃಷ್ಣಪಕ್ಷ ಷಷ್ಠಿಯವರೆಗೆ

**ಆಷಾಢ ಮಾಸ**

ಜು. 18 ಸೋಮ-ಪೂ.ಭಾ-ಪಂಚಮಿ,
ಜು. 19 ಮಂಗಳ-ಉ.ಭಾ-ಷಷ್ಠಿ,
ಜು. 20 ಬುಧ-ರೇವತಿ-ಸಪ್ತಮಿ,
ಜು. 27 ಬುಧ-ಪುನರ್ವಸು-ಚತುರ್ದಶಿ,
ಜು. 28 ಗುರು-ಪುನರ್ವಸು-ಅಮವಾಸ್ಯೆ,

**ಶ್ರಾವಣ ಮಾಸ**

**ಜು 29 ಶುಕ್ರ-ಪುಷ್ಯ-ಪ್ರತಿಪದ, ಶ್ರೀಕ್ಷೇತ್ರ ಹೊಂಬುಜದಲ್ಲಿ ಮೊದಲನೇ ಸಂಪತ್ ಶುಕ್ರವಾರದ ವಿಶೇಷ ಪೂಜೆ,**
ಜು. 30 ಶನಿ-ಆಶ್ಲೇಷಾ-ಬಿದಿಗೆ,
ಜು. 31 ಭಾನು-ಮಘಾ-ತದಿಗೆ,
**ಆ. 2 ಮಂಗಳ-ಉತ್ತರ-ಪಂಚಮಿ, ನಾಗರ ಪಂಚಮಿ,**
ಆ. 3 ಬುಧ-ಹಸ್ತ-ಪಂಚಮಿ,
**ಆ. 4 ಗುರು-ಚಿತ್ತ-ಷಷ್ಠಿ-ಸಪ್ತಮಿ, ಮುಕುಟ ಸಪ್ತಮಿ, ಪಾರ್ಶ್ವನಾಥ ತೀರ್ಥಂಕರರ ಮೋಕ್ಷಕಲ್ಯಾಣ ಪೂಜೆ,**
**ಆ 5 ಶುಕ್ರ-ಸ್ವಾತಿ-ಅಷ್ಟಮಿ, ಶ್ರೀಕ್ಷೇತ್ರ ಹೊಂಬುಜದಲ್ಲಿ ಎರಡನೇ ಸಂಪತ್ ಶುಕ್ರವಾರ, ವರಮಹಾಲಕ್ಷ್ಮೀವ್ರತ,**
ಆ. 6 ಶನಿ-ವಿಶಾಖ-ನವಮಿ,
ಆ. 7 ಭಾನು-ಅನುರಾಧ-ದಶಮಿ,
ಆ. 8 ಸೋಮ-ಜ್ಯೇಷ್ಠ-ಏಕಾದಶಿ,
ಆ. 9 ಮಂಗಳ-ಮೂಲ-ದ್ವಾದಶಿ,
ಆ. 10 ಬುಧ-ಪೂ.ಷಾ.-ತ್ರಯೋದಶಿ,
**ಆ. 11 ಗುರು-ಶ್ರವಣ-ಚತುರ್ದಶಿ, ಶ್ರೀಕ್ಷೇತ್ರ ಹೊಂಬುಜದಲ್ಲಿ ಉಪಾಕರ್ಮ, (ಯಜ್ಞೋಪವೀತಧಾರಣೆ)**
**ಆ. 12 ಶುಕ್ರ-ಧನಿಷ್ಠ-ಹುಣ್ಣಿಮೆ-ಪ್ರತಿಪದ, ಶ್ರೀಕ್ಷೇತ್ರ ಹೊಂಬುಜದಲ್ಲಿ ಮೂರನೇ ಸಂಪತ್ ಶುಕ್ರವಾರ ವಿಶೇಷ ಪೂಜೆ,**
ಆ. 13 ಶನಿ-ಶತಬಿಷಾ-ಬಿದಿಗೆ
ಆ. 14 ಭಾನು-ಪೂ.ಭಾ.-ತದಿಗೆ,
ಆ. 15 ಸೋಮ-ಉ.ಭಾ.-ಚತುರ್ಥಿ

## ಗುರುದೇವ ಪತ್ರಿಕೆಯ ಪೋಷಕರು ಹಾಗೂ ಅಜೀವ ಸದಸ್ಯರ ಶುಭನಾಮಾವಳಿಗಳು

**ಪೋಷಕರು**

| | | |
|---|---|---|
| 1) | ದಿ॥ ಶ್ರೀಮತಿ ಅನಂತಮತಿ ಬುಜ್ಜಪ್ಪ ದಶರಥಕರ, ಅಮರಾಪುರ ಇವರ ಸ್ಮರಣಾರ್ಥ ಶ್ರೀಮತಿ ಅಲಕನಂದಾ ಪಾರ್ಶ್ವನಾಥ ಜೈನ್ | 5000=00 |
| 2) | ದಿ॥ ಶ್ರೀಮತಿ ಅಂಬುಜಮ್ಮ ಸನತ್‌ಕುಮಾರ್, ಅಮರಾಪುರ ಇವರ ಸ್ಮರಣಾರ್ಥ ಶ್ರೀಮತಿ ಅಲಕನಂದಾ ಪಾರ್ಶ್ವನಾಥ ಜೈನ್ | 5000=00 |

**ಅಜೀವ ಸದಸ್ಯರು**

| | | |
|---|---|---|
| 1) | ಶ್ರೀ ಬಿ. ಚಂದ್ರಪ್ರಭು, ದಾವಣಗೆರೆ | 1000=00 |
| 2) | ಶ್ರೀಮತಿ ಜಯಶ್ರೀ ಗೌತಮ್‌ಚಂದ್ ಹಜಾರೆ, ತೇರದಾಳ್ | 1000=00 |
| 3) | ಕುಮೋದಿನಿ ಎಂ. ಜೈನ್, ಮುಂಬೈ | 1000=00 |

ಜಗದ್ಗುರು ಸ್ವಸ್ತಿಶ್ರೀ ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮಿಗಳವರು ದಾನ ನೀಡಿದವರಿಗೆ ಶುಭಾಶೀರ್ವಾದ ಮಾಡಿರುತ್ತಾರೆ





ಸಾಗರ/ತುಮರಿ : ಒಂದೇ ಶಾಲೆಯ ಇಬ್ಬರು ವಿದ್ಯಾರ್ಥಿಗಳು ನವೋದಯ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಶಾಲೆಯ ಹಾಗೂ ಪೋಷಕರ ಗೌರವ ಹೆಚ್ಚಿಸಿದ್ದಾರೆ. ಹೊಂಬುಜ ಜೈನ ಮಠದ ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿಯವರ ಆಶ್ರಯದಲ್ಲಿ ನಡೆಯುತ್ತಿರುವ ಜ್ಞಾನ ಭಾರತಿ ಕಿರಿಯ ಪ್ರಾಥಮಿಕ ಶಾಲೆ, ಹಾರಿಗೆ ಪ್ರಮೀತ್ ಹಾಗೂ ತನ್ಮಯ್ 2022-23ನೇ ಸಾಲಿನ ನವೋದಯ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ನವೋದಯ ಶಾಲೆಗೆ ಆಯ್ಕೆಯಾಗಿದ್ದಾರೆ. ಇವರಿಗೆ ಪರಮಪೂಜ್ಯ ಶ್ರೀಗಳವರು ಅಭಿನಂದನೆ ಸಲ್ಲಿಸಿದ್ದಾರೆ.

## ಶ್ರಾವಣ ಮಾಸದ 'ಸಂಪತ್ ಶುಕ್ರವಾರ' ಪೂಜಾ ಕಾರ್ಯಕ್ರಮ

ಅತಿಶಯ ಶ್ರೀಕ್ಷೇತ್ರ ಹೊಂಬುಜದ ಭಗವಾನ್ ಶ್ರೀ ಪಾರ್ಶ್ವನಾಥ ಸ್ವಾಮಿ ಮತ್ತು ಮಹಾಮಾತೆ ಶ್ರೀ ಪದ್ಮಾವತಿ ದೇವಿ ಸನ್ನಿಧಿಯಲ್ಲಿ ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯ ಮಹಾಸ್ವಾಮೀಜಿಗಳವರ ದಿವ್ಯ ಸಾನಿಧ್ಯ, ನೇತೃತ್ವ ಹಾಗೂ ಮಾರ್ಗದರ್ಶನದಲ್ಲಿ ಶ್ರಾವಣ ಸಂಪತ್ ಶುಕ್ರವಾರ ಪೂಜಾ ಮಹೋತ್ಸವಗಳು ಜರುಗಲಿರುವುದು. ಸದ್ಧರ್ಮ ಭಕ್ತವೃಂದದವರು ಶ್ರೀಕ್ಷೇತ್ರಕ್ಕೆ ಆಗಮಿಸಿ ಪೂಜಾ ವಿಧಿ-ವಿಧಾನಗಳಲ್ಲಿ ಪಾಲ್ಗೊಂಡು ತಮ್ಮ ಭಕ್ತಿ ಪೂರ್ವಕ ಪೂಜೆಯನ್ನು ಸಮರ್ಪಿಸಿ ಭಗವಾನ್ ಶ್ರೀಪಾರ್ಶ್ವನಾಥ ಸ್ವಾಮಿ, ಮಹಾಮಾತೆ ಶ್ರೀಪದ್ಮಾವತಿ ಅಮ್ಮನವರ ಕೃಪೆಗೆ ಪಾತ್ರರಾಗಬೇಕೆಂದು ಅಪೇಕ್ಷಿಸಲಾಗಿದೆ.

### ಸಂಪತ್ ಶ್ರಾವಣ ಶುಕ್ರವಾರ

| | |
|---|---|
| 29-07-2022, ಶುಕ್ರವಾರ | ಶ್ರಾವಣ ಮಾಸ ಪ್ರಾರಂಭ, ಮೊದಲ ಸಂಪತ್ ಶುಕ್ರವಾರ. |
| 02-08-2022, ಮಂಗಳವಾರ | ನಾಗರಪಂಚಮಿ. |
| 04-08-2022, ಗುರುವಾರ | ಮುಕುಟ ಸಪ್ತಮಿ. ಪಾರ್ಶ್ವನಾಥ ತೀರ್ಥಂಕರರ ಮೋಕ್ಷಕಲ್ಯಾಣ ಪೂಜೆ |
| 05-08-2022, ಶುಕ್ರವಾರ | ಎರಡನೇ ಸಂಪತ್ ಶುಕ್ರವಾರ, ವರಮಹಾಲಕ್ಷ್ಮೀ ವ್ರತ. |
| 11-08-2022, ಗುರುವಾರ | ಉಪಾಕರ್ಮ (ಶ್ರವಣ ನಕ್ಷತ್ರ) ಯಜ್ಞೋಪವೀತಧಾರಣೆ. |
| 12-08-2022, ಶುಕ್ರವಾರ | ಮೂರನೇ ಸಂಪತ್ ಶುಕ್ರವಾರ. |
| 19-08-2022, ಶುಕ್ರವಾರ | ನಾಲ್ಕನೇ ಸಂಪತ್ ಶುಕ್ರವಾರ. |
| 26-08-2022, ಶುಕ್ರವಾರ | ಐದನೇ ಸಂಪತ್ ಶುಕ್ರವಾರ. |

### ಸೋಣ ಶುಕ್ರವಾರ

ದಿನಾಂಕ : 19-08-2022 ಮೊದಲನೇ ಸೋಣ ಶುಕ್ರವಾರ, 26-08-2022 ಎರಡನೇ ಸೋಣ ಶುಕ್ರವಾರ, 02-09-2022 ಮೂರನೇ ಸೋಣ ಶುಕ್ರವಾರ, 09-09-2022 ನಾಲ್ಕನೇ ಸೋಣ ಶುಕ್ರವಾರ, 16-09-2022 ಐದನೇ ಸೋಣ ಶುಕ್ರವಾರ.

### ಸೋಣ ಶುಕ್ರವಾರದ ವಿಶೇಷ ಪೂಜೆಗಳು

ಶ್ರೀಕ್ಷೇತ್ರ ಹೊಂಬುಜ ಮಹಾಸಂಸ್ಥಾನದ ಶಾಖಾ ಕ್ಷೇತ್ರಗಳಾದ ವರಂಗ ಮತ್ತು ಹಟ್ಟಿಯಂಗಡಿಯಲ್ಲಿ ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ದೇವೇಂದ್ರಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯ ಮಹಾಸ್ವಾಮೀಜಿಯವರ ಮಾರ್ಗದರ್ಶನದಲ್ಲಿ ಸೋಣ ಶುಕ್ರವಾರದ ಪೂಜೆಗಳು ದಿನಾಂಕ 19-08-2022, 26-08-2022, 02-09-2022, 09-09-2022 ಹಾಗೂ 16-09-2022 ರಂದು ನೆರವೇರಲಿವೆ.

ಸಂಪರ್ಕ- ಶ್ರೀ ವರಂಗ ಜೈನ ಮಠ : 9845548688, ಶ್ರೀ ಹಟ್ಟಿಯಂಗಡಿ ಜೈನ ಮಠ : 9448869955

## ಚಾತುರ್ಮಾಸ ಆಚರಣೆ

ಅತಿಶಯ ಶ್ರೀಕ್ಷೇತ್ರ ಹೊಂಬುಜವು ಅತಿ ಪ್ರಾಚೀನ ಹಾಗೂ ಮುನಿಗಳ ತಪಸ್ಸಿನಿಂದ ಪುನೀತವಾಗಿರುವ ಸ್ಥಳ. ಸಾವಿರಾರು ವರ್ಷಗಳ ಇತಿಹಾಸವಿರುವ ಇಲ್ಲಿ ಅನೇಕ ಮಹಾತ್ಮರು ಸಾಧನೆ ಮಾಡಿರುವ ಶಾಸನಗಳಿವೆ. ಶುಭಕೃತುನಾಮ ಸಂವತ್ಸರದ ಈ ವರ್ಷದ ವರ್ಷಾಯೋಗ - ಚಾತುರ್ಮಾಸ ವ್ರತವನ್ನು ಹೊಂಬುಜದ ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿಗಳವರ ಪಾವನ ಸಾನಿಧ್ಯ, ನೇತೃತ್ವ ಹಾಗೂ ಮಾರ್ಗದರ್ಶನದಲ್ಲಿ ಈ ನಾಲ್ಕು ತಿಂಗಳ ಸಂದರ್ಭದಲ್ಲಿ ಅನೇಕ ವ್ರತ-ನೋಂಪಿ, ಪರ್ವಗಳ ಜೊತೆಗೆ ಧಾರ್ಮಿಕ, ಸಾಂಸ್ಕೃತಿಕ ವಿಶೇಷ ಕಾರ್ಯಕ್ರಮಗಳನ್ನು ಶ್ರೀಕ್ಷೇತ್ರದಲ್ಲಿ ಆಯೋಜಿಸಲಾಗಿದೆ.

ಚಾತುರ್ಮಾಸದ ಅವಧಿಯಲ್ಲಿ ಜುಲೈನಿಂದ ನವೆಂಬರ್‌ವರೆಗೆ ಮುಕುಟ ಸಪ್ತಮಿ, ರಕ್ಷಾ ಬಂಧನ, ಷೋಡಶಕಾರಣ ವ್ರತ, ದಶಲಕ್ಷಣ ಮಹಾಪರ್ವ, ಅನಂತ ಚತುರ್ದಶಿ, ನವರಾತ್ರಿ, ದೀಪಾವಳಿ, ವಿವಿಧ ನೋಂಪಿ ವ್ರತಗಳು ನಡೆಯಲಿವೆ. ಈ ಧರ್ಮ ಪ್ರಭಾವನೆಯ ಕಾರ್ಯದಲ್ಲಿ ಧರ್ಮಬಾಂಧವರು ಭಾಗವಹಿಸಿ ಪುಣ್ಯಾರ್ಜನೆಗಳಿಸಬೇಕೆಂದು ಅಪೇಕ್ಷೆ.

## ಬಿಂಬ ಹಾಗೂ ದೇವಸಾನಿಧ್ಯಗಳ ಉತ್ಥಾಪನಾ ವಿಧಿ



**ಕಾರ್ಕಳ** : ನೂತನವಾಗಿ ಕಾರ್ಕಳದ ಶ್ರೀ ಜೈನ ಮಠ ನಿರ್ಮಾಣದ ಪೂರ್ವದಲ್ಲಿ ಬಿಂಬ ಹಾಗೂ ದೇವಸಾನಿಧ್ಯಗಳ ಉತ್ಥಾಪನಾ ವಿಧಿ ಜೂನ್ 13 ರಂದು ನೆರವೇರಿತು. ಮುನಿಶ್ರೀ 108 ಅಮಿತತಂಜನಕೀರ್ತಿ ಮಹಾರಾಜರು, ಕಾರ್ಕಳ ಶ್ರೀಮಠದ ಪೀಠಾಧೀಶರಾದ ಧ್ಯಾನಯೋಗಿ ಪರಮಪೂಜ್ಯ ಸ್ವಸ್ತಿಶ್ರೀ ಲಲಿತಕೀರ್ತಿ ಭಟ್ಟಾರಕ ಸ್ವಾಮೀಜಿಗಳವರು, ಧರ್ಮಸ್ಥಳದ ಧರ್ಮಾಧಿಕಾರಿ ಡಾ. ಡಿ. ವೀರೇಂದ್ರ ಹೆಗ್ಗಡೆಯವರ ಪ್ರತಿನಿಧಿಯಾಗಿ ಡಿ. ಹರ್ಷೇಂದ್ರ ಕುಮಾರ್, ಜೈನ ಜೀರ್ಣೋದ್ಧಾರಕ ಸಂಘದ ಅಧ್ಯಕ್ಷ ಡಾ. ಎಂ.ಎನ್. ರಾಜೇಂದ್ರಕುಮಾರ್, ಕಾರ್ಯದರ್ಶಿ ಎಂ.ಕೆ. ವಿಜಯಕುಮಾರ, ಪುಷ್ಪರಾಜ ಜೈನ್ ಹಾಗೂ ಸ್ಥಳೀಯ ಶ್ರಾವಕ-ಶ್ರಾವಿಕೆಯರು ಜಿನಬಿಂಬಗಳನ್ನು ಬಾಲಾಲಯದಲ್ಲಿ ಉತ್ಥಾಪನೆ ಮಾಡುವ ವಿಧಿ-ವಿಧಾನಗಳಲ್ಲಿ ಪಾಲ್ಗೊಂಡರು. 2 ವರ್ಷ ಅವಧಿಯಲ್ಲಿ ಪುನರ್ ನಿರ್ಮಾಣ ಪೂರ್ಣಗೊಳ್ಳಲಿದೆ ಎಂದು ಶ್ರೀಗಳವರು ತಿಳಿಸಿದರು.

## ಗೌರವ ಸಮರ್ಪಣೆ-ಪ್ರತಿಭಾ ಪುರಸ್ಕಾರ-ಸಾಧಕರಿಗೆ ಸನ್ಮಾನ

### "ಪಾಠಶಾಲೆ ಹಾಗೂ ಶಿಕ್ಷಣ ಕೇಂದ್ರಗಳನ್ನು ಸ್ಥಾಪಿಸಿ"

-ಪರಮಪೂಜ್ಯ ಸ್ವಸ್ತಿಶ್ರೀ ಭುವನಕೀರ್ತಿ ಭಟ್ಟಾರಕ ಮಹಾಸ್ವಾಮೀಜಿ



**ಹುಬ್ಬಳ್ಳಿ** : ಐದು ವರ್ಷಗಳ ಕಾಲ ಹೊಸ ಜಿನಮಂದಿರಗಳನ್ನು ನಿರ್ಮಿಸುವ ಕಾರ್ಯವನ್ನು ನಿಲ್ಲಿಸಿಬಿಡಿ, ಬದಲಾಗಿ ಸಂಸ್ಕಾರ ಕೇಂದ್ರಗಳನ್ನು ಹಾಗೂ ಲೌಕಿಕ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸುವತ್ತ ಗಮನಕೊಡಿ ಎಂದು ಕನಕಗಿರಿ ಪರಮಪೂಜ್ಯ ಸ್ವಸ್ತಿಶ್ರೀ ಭುವನಕೀರ್ತಿ ಭಟ್ಟಾರಕ ಮಹಾಸ್ವಾಮೀಜಿಗಳವರು ಹೇಳಿದರು.

ಹುಬ್ಬಳ್ಳಿಯ ಶಾಂತಿನಾಥ ಸಾಂಸ್ಕೃತಿಕ ಭವನದಲ್ಲಿ ಜುಲೈ 3 ರಂದು ದಿಗಂಬರ ಜೈನ ಸಮಾಜವು ಸ್ವಸ್ತಿಶ್ರೀ ಭುವನಕೀರ್ತಿ ಭಟ್ಟಾರಕರ ಪಟ್ಟಾಭಿಷೇಕ ರಜತ ಮಹೋತ್ಸವದ ಅಂಗವಾಗಿ ಏರ್ಪಡಿಸಿದ್ದ ಗೌರವ ಸಮರ್ಪಣೆ, ಆಚಾರ್ಯ ಶ್ರೀ ನಿಜಾನಂದಸಾಗರ ಮಹಾರಾಜರ ಸ್ಮರಣಾರ್ಥ ಪ್ರತಿಭಾ ಪುರಸ್ಕಾರ ಹಾಗೂ ಸಾಧಕರ ಸನ್ಮಾನ ಕಾರ್ಯಕ್ರಮದ ಸಾನಿಧ್ಯ ವಹಿಸಿ ಮಾತನಾಡಿದರು.

ನಮ್ಮ ಸಮಾಜದ ಗೌರವಶಾಲಿ ಪರಂಪರೆ ಮತ್ತು ಸಂಸ್ಕೃತಿ ಉಳಿಸುವ ಕೆಲಸ ಆಗಬೇಕು. ಆ ನಿಟ್ಟಿನಲ್ಲಿ ವಿದ್ಯಾರ್ಥಿಗಳಿಗೆ ಉತ್ತಮ ಶಿಕ್ಷಣ, ಮಾರ್ಗದರ್ಶನ ನೀಡಬೇಕು. ಸಮಾಜದ ವಿದ್ಯಾರ್ಥಿಗಳು ಅತ್ಯುನ್ನತ ಹುದ್ದೆಗಳನ್ನು ಅಲಂಕರಿಸುವಂತಾಬೇಕು ಎಂದರು. ಜೈನ ಧರ್ಮವು ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿಗೆ ಅಪಾರ ಕೊಡುಗೆ ನೀಡಿದೆ. ಜೈನ ಪುರಾಣಗಳು ಕಾಲ್ಪನಿಕವಲ್ಲ. ಅವು ಮಹಾನ್ ಪುರುಷರ ಕುರಿತು ಸತ್ಯ ಘಟನೆಗಳನ್ನು ಆಧರಿಸಿವೆ. ಜೈನಾಚಾರ್ಯರು ರಚಿಸಿದ ಶಾಸ್ತ್ರಗಳು ಸಕಲ ಜೀವಿಗಳಿಗೆ ಧರ್ಮ ಮಾರ್ಗದಲ್ಲಿ ನಡೆಯಲು ಪ್ರೇರಣೆ ನೀಡುತ್ತದೆ ಎಂದರು.

ಇತಿಹಾಸದಲ್ಲಿ ಉಲ್ಲೇಖವಾಗಿರುವ ಅನೇಕ ಪ್ರಮುಖ ಗ್ರಂಥಗಳು ನಮಗೆ ಲಭ್ಯವಾಗಿಲ್ಲ. ಅವುಗಳನ್ನು ಬೆಳಕಿಗೆ ತರುವ ನಿಟ್ಟಿನಲ್ಲಿ ಸಂಶೋಧನೆ ನಡೆಸಬೇಕು. ಪ್ರಮುಖ ಸ್ಥಳಗಳಲ್ಲಿ ಉತ್ಖನನ ನಡೆಯಬೇಕು ಎಂದು ಅಭಿಪ್ರಾಯ ಪಟ್ಟರು. ಪಟ್ಟಾಭಿಷೇಕ ರಜತ ವರ್ಷಗಳನ್ನು ಪೂರೈಸಿದ ಪೂಜ್ಯ ಭಟ್ಟಾರಕರಿಗೆ ದಿಗಂಬರ ಜೈನ ಸಮಾಜದಿಂದ ಅದ್ದೂರಿಯಾಗಿ ಸನ್ಮಾನಿಸಿ ಗೌರವ ಸಮರ್ಪಿಸಲಾಯಿತು. ಸಮಾಜದ ಹದಿನೆಂಟು ಸಂಘ ಸಂಸ್ಥೆಗಳ ಪ್ರಮುಖರು ಪೂಜ್ಯರಿಗೆ ಗೌರವ ಸಮರ್ಪಣೆ ಮಾಡಿದರು.

ಸಮಾಜ ಸೇವೆ, ಕ್ರೀಡೆ, ಕಲೆ, ಸಂಸ್ಕೃತಿ, ಶಿಕ್ಷಣ ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸೇವೆ-ಸಾಧನೆ ಮಾಡಿದ ಮಹನೀಯರನ್ನು ಸಮಾಜ ಗೌರವ ಎಂದು ಗುರುತಿಸಿ ಸನ್ಮಾನಿಸಿ ಅಭಿನಂದಿಸಲಾಯಿತು. ಎಸ್.ಟಿ. ಅಕ್ಕಿ, ಧರಣೇಂದ್ರ ಜವಳಿ, ಶಾಂತಿನಾಥ ಹೋತಪೇಟಿ, ವಿಮಲ್ ತಾಳಿಕೋಟಿ, ಆರ್.ಟಿ. ತವನಪ್ಪನವರ, ಸುಧಾ ಶಿರಗುಪ್ಪಿ, ನಂದಾರಾಣಿ ಪಾಟೀಲ, ಸಾಚಿ ದೇಸಾಯಿ, ನಿಸರ್ಗ ದಯಣ್ಣವರ, ವೀರಾ ಕುಂದೂರ ಮುಂತಾದವರನ್ನು ಸನ್ಮಾನಿಸಲಾಯಿತು. ಎಸ್.ಎಸ್.ಎಲ್.ಸಿ. ಹಾಗೂ ಪಿ.ಯು.ಸಿ. ಹಾಗೂ ವಿವಿಧ ಉನ್ನತ ಪರೀಕ್ಷೆಗಳಲ್ಲಿ ಉತ್ತಮ ಸಾಧನೆ ಮಾಡಿದ 54 ವಿದ್ಯಾರ್ಥಿಗಳನ್ನು ಸನ್ಮಾನಿಸಿ, ಅಭಿನಂದಿಸಲಾಯಿತು. ಸಮಾರಂಭಕ್ಕೆ ಮುನ್ನ ಪೂಜ್ಯ ಸ್ವಾಮೀಜಿಯವರಿಗೆ ಮಂಗಲವಾದ್ಯ, ಮಂಗಲಕುಂಭ, ಪುಷ್ಪವೃಷ್ಟಿ, ಪಾದಪೂಜೆ, ಆರತಿಗಳೊಂದಿಗೆ ಭವ್ಯ ಸ್ವಾಗತ ನೀಡಲಾಯಿತು.

ದಿಗಂಬರ ಜೈನ ಸಮಾಜದ ಅಧ್ಯಕ್ಷ ರಾಜೇಂದ್ರ ಬೀಳಗಿ ಅಧ್ಯಕ್ಷತೆ ವಹಿಸಿದ್ದರು. ಪ್ರಭಾಮಣಿ ಪಂಡಿತರಿಂದ ಜಿನಸ್ತುತಿ, ಆರ್.ಟಿ. ತವನಪ್ಪನವರಿಂದ ಸ್ವಾಗತ ಹಾಗೂ ನಿರ್ವಹಣೆ, ಶಾಂತಿನಾಥ ಹೋತಪೇಟಿ ಅವರಿಂದ ಕನಕಗಿರಿ ಕ್ಷೇತ್ರ ಹಾಗೂ ಸ್ವಾಮೀಜಿ ಪರಿಚಯ ನಡೆಯಿತು.

ಸುಹಾಸ್ ಜವಳಿ, ಶ್ರೇಣಿಕರಾಜ್ ರಾಜಮಾನೆ, ಮಹಾವೀರ ಗೋಂಗಡಿ, ಸಂತೋಷ ಮುರಗಿ, ಮನ್ಮಥ ಕ್ಯಾಸಾ, ಅನಿಲ ಬೀಳಗಿ, ಅಭಯ ಸೂಜಿ, ಸುಹಾಸ ಲೆಂಗಡೆ, ರಾಜೇಂದ್ರ ದಿನಕರ, ಶರಶ್ಚಂದ್ರ ಕುತ್ತೆ, ಅಜಯ ಬೀಳಗಿ, ಅಭಿನಂದನ ವನಕುದ್ರೆ, ಉದಯ ಧಡೋತಿ, ಆರ್.ಟಿ. ಅಣ್ಣಿಗೇರಿ, ಬ್ರಹ್ಮಕುಮಾರ ಬೀಳಗಿ ವೇದಿಕೆಯಲ್ಲಿ ಇದ್ದರು.

## ಶುಕ್ರವಾರ ನೋಂಪಿ ಉದ್ಯಾಪನೆ




**ಹೊಂಬುಜ** : ಅತಿಶಯ ಶ್ರೀಕ್ಷೇತ್ರ ಹೊಂಬುಜ ಜೈನ ಮಠದಲ್ಲಿ ಶುಕ್ರವಾರ ನೋಂಪಿ ಉದ್ಯಾಪನೆಯು ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯ ಮಹಾಸ್ವಾಮೀಜಿಯವರ ಸಾನಿಧ್ಯ, ನೇತೃತ್ವ ಹಾಗೂ ಮಾರ್ಗದರ್ಶನದಲ್ಲಿ ದಿ. 08-07-2022 ರಂದು ಅದ್ದೂರಿಯಾಗಿ ನೆರವೇರಿತು. ಅಂದು ಶ್ರಾವಕ-ಶ್ರಾವಕಿಯರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಪುಣ್ಯಲಾಭ ಪಡೆದರು. ಈ ಸಂದರ್ಭದಲ್ಲಿ ಶ್ರೀ ಪದ್ಮಾವತಿ ಮಹಿಳಾ ಸಮಾಜದ ನೋಂಪಿ ವ್ರತಧಾರಿಗಳು "ಶ್ರೀ ಶುಕ್ರವಾರ ನೋಂಪಿ ಕಥಾ" ಎಂಬ ಶಾಸ್ತ್ರವನ್ನು ಪೂಜ್ಯ ಸ್ವಾಮೀಜಿಯವರ ಅಮೃತ ಹಸ್ತದಿಂದ ಶಾಸ್ತ್ರದಾನ ಮಾಡಲಾಯಿತು.



## ರಾಜ್ಯಸಭಾ ಸದಸ್ಯರಾಗಿ ಆಯ್ಕೆ

ಧರ್ಮಸ್ಥಳದ ಧರ್ಮಾಧಿಕಾರಿಗಳಾದ ಡಾ. ಡಿ. ವೀರೇಂದ್ರ ಹೆಗ್ಗಡೆಯವರು ಮಾಡುತ್ತಿರುವ ಜನಪರ ಹಾಗೂ ಗ್ರಾಮೀಣಾಭಿವೃದ್ಧಿಯಂತಹ ಪರೋಪಕಾರಿ ಕಾರ್ಯಗಳನ್ನು ಗಮನಿಸಿ, ಪ್ರಧಾನ ಮಂತ್ರಿಗಳಾದ ಸನ್ಮಾನ್ಯ ಶ್ರೀ ನರೇಂದ್ರ ಮೋದಿಯವರು, ಶ್ರೀ ಅಮಿತ್ ಷಾ ಹಾಗೂ ಪಕ್ಷದ ರಾಷ್ಟ್ರೀಯ ಮತ್ತು ರಾಜ್ಯಾಧ್ಯಕ್ಷರು ತಮ್ಮನ್ನು ರಾಜ್ಯಸಭಾ ಸದಸ್ಯರಾಗಿ ಆಯ್ಕೆ ಮಾಡಿರುತ್ತಾರೆ.

ಇವರು ಸಮಾಜದ ಎಲ್ಲಾ ಕ್ಷೇತ್ರಗಳ ಅಭಿವೃದ್ಧಿಗೆ ಶ್ರಮಿಸಿದವರು. ತಮ್ಮ ಮಹತ್ವಾಕಾಂಕ್ಷೆಯ ಯೋಜನೆಗಳ ಮೂಲಕ ಗ್ರಾಮೀಣ ಸಮುದಾಯದವರ ನೋವು ಸಂಕಷ್ಟಗಳಿಗೆ ಸ್ಪಂದಿಸಿದ್ದೀರಿ. ಸಾಮಾಜಿಕ ಚಳುವಳಿ, ಸಾಮಾಜಿಕ ಜನಜಾಗೃತಿ ಕಾರ್ಯಕ್ರಮಗಳ ನೇತಾರರು, ಧರ್ಮಾಧಿಕಾರಿಗಳಾಗಿ ಅನ್ನದಾನ, ವಿದ್ಯಾದಾನ, ಅಭಯದಾನ ಮತ್ತು ಔಷಧದಾನಗಳನ್ನು ಚಾಚೂ ತಪ್ಪದೇ ನಿರ್ವಹಣೆ ಮಾಡಿಕೊಂಡು ಬಂದಿದ್ದೀರಿ. ತಮ್ಮ ಆದರ್ಶ ವ್ಯಕ್ತಿತ್ವ ಎಲ್ಲಾ ಸಮುದಾಯದ ಧಾರ್ಮಿಕ ಮುಖಂಡರುಗಳಿಗೆ ಆದರ್ಶನೀಯವಾದದ್ದು.

ಇದೇ ರೀತಿ ಇವರ ಶಿಕ್ಷಣ, ಆರೋಗ್ಯ, ಸಾಂಸ್ಕೃತಿಕ ಕ್ಷೇತ್ರದಲ್ಲಿ ಸಮಾಜಮುಖಿ ಕಾರ್ಯಗಳು ಮುಂದುವರೆಯಲಿ. ಇವರಿಗೂ ಹಾಗೂ ಪರಿವಾರದವರಿಗೆ ಇನ್ನೂ ಉತ್ತಮ ಆಯುಆರೋಗ್ಯ ಸಕಲ ಸನ್ಮಂಗಳವುಂಟಾಗಲಿ ಎಂದು ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿಯವರ ಶುಭ ಹಾರೈಸಿದ್ದಾರೆ.

## 21ನೇ ವಾರ್ಷಿಕೋತ್ಸವ-ಪ್ರಶಸ್ತಿ ಪ್ರದಾನ-ಉಪನ್ಯಾಸ ಸಮಾರಂಭ

**ಸಾಲಿಗ್ರಾಮ** : ಜೈನ ಮಿತ್ರ ಮಂಡಲಿಯು 21ನೇ ವಾರ್ಷಿಕೋತ್ಸವವನ್ನು ಬೆಂಗಳೂರಿನಲ್ಲಿ ದಿನಾಂಕ 24–7–2022ರ ಸಂಜೆ 3.00 ಗಂಟೆಗೆ ಕನ್ನಡ ಸಾಹಿತ್ಯ ಪರಿಷತ್ತಿನ ಅಕ್ಕಮಹಾದೇವಿ ಸಭಾಂಗಣದಲ್ಲಿ ಏರ್ಪಡಿಸಿದೆ.

ಪ್ರಶಸ್ತಿ ಪ್ರದಾನ ಹಾಗೂ ಉಪನ್ಯಾಸ ಕಾರ್ಯಕ್ರಮದ ಅಧ್ಯಕ್ಷತೆಯನ್ನು ನಾಡೋಜ ಹಂಪನಾರವರು ವಹಿಸಲಿದ್ದಾರೆ. ಅಂದು 2021ನೇ ಸಾಲಿನ **'ಸುಮವಸಂತ'** ಪ್ರಶಸ್ತಿಯನ್ನು ಹಿರಿಯ ಜಾನಪದ ತಜ್ಞರು ಹಾಗೂ ಸಂಶೋಧಕರಾದ **ಡಾ. ಎಂ.ಎ. ಜಯಚಂದ್ರ**ರವರಿಗೂ **'ಶ್ರೇಯೋಭದ್ರ'** ಪ್ರಶಸ್ತಿಯನ್ನು ಸಮಾಜ ಸೇವೆಯಲ್ಲಿ ತೊಡಗಿಸಿಕೊಂಡಿರುವ ತುಮಕೂರಿನ ಲೇಖಕಿ ಹಾಗೂ ಧಾರ್ಮಿಕ ಶ್ರದ್ಧೆಯ ಬ್ರಹ್ಮಚಾರಿಣಿ **ಜಲಜ ಜೈನ್**ರವರಿಗೆ ಪ್ರದಾನ ಮಾಡಲಾಗುತ್ತದೆ.

ಉಪನ್ಯಾಸ ಕಾರ್ಯಕ್ರಮದಲ್ಲಿ ಲೇಖಕರಾದ ಡಾ. ಎಸ್.ಪಿ. ಪದ್ಮಪ್ರಸಾದ್‌ರವರು 'ಜೈನ ಕವಿಗಳ ವಿಶೇಷ ಕೊಡುಗೆಗಳು–13ನೇ ಶತಮಾನದವರೆಗೆ' ಎಂಬ ವಿಷಯದಲ್ಲಿ ಮಾತನಾಡಲಿದ್ದಾರೆ. 'ಜೈನ ಸಮಾಜದಲ್ಲಾಗುತ್ತಿರುವ ಬದಲಾವಣೆಗಳು' ಈ ವಿಷಯದಲ್ಲಿ ಖ್ಯಾತ ವಕೀಲರೂ ಚಿಕ್ಕಪೇಟೆಯ ಶ್ರೀ ದಿಗಂಬರ ಜೈನ ಮಹಾವೀರ ಸಂಘದ ಅಧ್ಯಕ್ಷರೂ ಆದ ಶ್ರೀ ಜೆ. ಪ್ರಕಾಶ್‌ರವರು ಮಾತನಾಡಲಿದ್ದಾರೆ. ಸಂಘದ ಅಧ್ಯಕ್ಷರಾದ ಡಾ. ನೀರಜಾ ನಾಗೇಂದ್ರಕುಮಾರರವರು ಹಾಗೂ ಕಾರ್ಯದರ್ಶಿಗಳಾದ ಶ್ರೀಮತಿ ಶಾಂತಲಾ ಪ್ರಸಾದ ಮತ್ತು ಕಾರ್ಯಕಾರಿ ಸಮಿತಿಯ ಸದಸ್ಯರು ಉಪಸ್ಥಿತರಿರುತ್ತಾರೆ. ಹೆಚ್ಚಿನ ಮಾಹಿತಿಗಾಗಿ ಮೊ:9900363460.

## ಉದ್ಯಮಿ ರಾಹುಲ್ ಬಳ್ಳಾಲ್ ನಿಧನ



**ಮಂಗಳೂರು** : ತುಳುನಾಡಿನ ಇತಿಹಾಸದಲ್ಲಿ ಪ್ರಮುಖವಾಗಿ ಗುರುತಿಸಿಕೊಂಡಿರುವ ಜೈನ ಮನೆತನದ ವಾರಸುದಾರ, ಧರ್ಮಾನುರಾಗಿಗಳಾದ ಬೆಳ್ತಂಗಡಿ ರತ್ನತ್ರಯ ದಿಗಂಬರ ಜೈನ ತೀರ್ಥಕ್ಷೇತ್ರದ ಆಡಳಿತ ಮೊಕ್ತೇಸರರಾದ ಮಂಗಳೂರಿನ ಶ್ರೀ ಜಯವರ್ಮರಾಜ ಬಳ್ಳಾಲರವರ ಸುಪುತ್ರ ಯುವ ಉದ್ಯಮಿ ಶ್ರೀ ರಾಹುಲ್ ಬಳ್ಳಾಲ್ (51) ರವರು ಸ್ವರ್ಗಸ್ಥರಾದರು. ಇವರು ತಮ್ಮ ಕುಟುಂಬದಿಂದ ಹಿಂದಿನಿಂದಲೂ ಬಂದಿರುವ ದಾನ–ಧರ್ಮಾದಿ ಕಾರ್ಯಗಳಲ್ಲಿ ಸಕ್ರೀಯವಾಗಿ ತೊಡಗಿಕೊಂಡಿದ್ದರು. ಸರಳತೆ, ಆತ್ಮೀಯತೆ, ನಯ–ವಿನಯತೆ ಅವರ ವ್ಯಕ್ತಿತ್ವಕ್ಕೆ ಶೋಭೆ ತಂದುಕೊಟ್ಟಿತ್ತು. ಸಂಕಷ್ಟದಲ್ಲಿರುವವರ ಸಮಸ್ಯೆಗಳಿಗೆ ತ್ವರಿತವಾಗಿ ಸ್ಪಂದಿಸುವ ಮಾನವೀಯತೆಯ ಸಾಕಾರ ಮೂರ್ತಿಯಾಗಿದ್ದರು. ಬಳ್ಳಾಲ್ ಮನೆತನ ಸೇವಾಕೈಂಕರ್ಯಗಳನ್ನು ಅಷ್ಟೇ ಆಸಕ್ತಿಯಿಂದ ಮುಂದುವರೆಸಿಕೊಂಡು ಬಂದವರು. ರತ್ನತ್ರಯ ಕ್ಷೇತ್ರದಲ್ಲಿ ಜರುಗುವ ಎಲ್ಲಾ ದೇವರ ಪೂಜೆ, ಉತ್ಸವಗಳಲ್ಲಿ ಮುಂಚೂಣಿಯಲ್ಲಿರುತ್ತಿದ್ದರು.

ಶ್ರೀಹೊಂಬುಜ ಜೈನಮಠದ ಹಿಂದಿನ ಭಟ್ಟಾರಕರ ನಿಧನ ನಂತರ ಮಠದ ಆಡಳಿತ ಮಂಡಳಿಯಲ್ಲಿದ್ದಾಗ ಯಾತ್ರಿನಿವಾಸಗಳ ಜೀರ್ಣೋದ್ಧಾರ ಹಾಗೂ ಪಟ್ಟಾಭಿಷೇಕ ಕಾರ್ಯಕ್ರಮಗಳಲ್ಲಿ ಸಕ್ರೀಯವಾಗಿ ಭಾಗವಹಿಸಿದ್ದರು. ಇವರ ಈ ಆಕಸ್ಮಿಕ ವಿಯೋಗವು ಸಮಾಜಕ್ಕೆ, ಬಂಧು–ಬಾಂಧವರಿಗೆ ತುಂಬಲಾರದ ನಷ್ಟವಾಗಿದೆ. ಈ ದುಃಖವನ್ನು ಸಹಿಸುವ ಶಕ್ತಿಯನ್ನು ಭಗವಾನ್ ಶ್ರೀ ಪಾರ್ಶ್ವನಾಥ ಸ್ವಾಮಿ ಹಾಗೂ ಜಗನ್ಮಾತೆ ಶ್ರೀಪದ್ಮಾವತಿ ಅಮ್ಮನವರು ಕರುಣಿಸಲೆಂದು ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿಗಳವರು ತಿಳಿಸಿದರು.

॥ ಶ್ರೀ ಪಾರ್ಶ್ವನಾಥಾಯ ನಮಃ ॥ ॥ ಶ್ರೀ ಪದ್ಮಾಂಬಾಯೈ ನಮಃ ॥



## ಶ್ರೀ ಹೊಂಬುಜ ಅತಿಶಯ ಮಹಾಕ್ಷೇತ್ರದಲ್ಲಿ



## ಶ್ರಾವಣ ಮಾಸದ ಸಂಪತ್ ಶುಕ್ರವಾರ ಪೂಜಾ ಕಾರ್ಯಕ್ರಮಗಳು

ಆತ್ಮೀಯ ಧರ್ಮಬಂಧುಗಳೇ,

**29-07-2022, 05-08-2022, 12-08-2022, 19-08-2022, 26-08-2022ನೇ ಶುಭ ಶುಕ್ರವಾರಗಳಂದು ಅತಿಶಯ ಮಹಾಕ್ಷೇತ್ರದಲ್ಲಿ**

**ಭಗವಾನ್ ಶ್ರೀ ೧೦೦೮ ಪಾರ್ಶ್ವನಾಥ ಸ್ವಾಮಿ ಮತ್ತು ಜಗನ್ಮಾತೆ ಶ್ರೀ ಪದ್ಮಾವತಿ ಅಮ್ಮನವರ ವಿಶೇಷ ಪೂಜಾ ಕಾರ್ಯಕ್ರಮಗಳು**



ಪರಮಪೂಜ್ಯ ಜಗದ್ಗುರು
ಸ್ವಸ್ತಿಶ್ರೀ ದೇವೇಂದ್ರಕೀರ್ತಿ ಭಟ್ಟಾರಕ
ಪಟ್ಟಾಚಾರ್ಯವರ್ಯ ಮಹಾಸ್ವಾಮಿಗಳವರ
ದಿವ್ಯ ಸಾನಿಧ್ಯ, ನೇತೃತ್ವ ಮತ್ತು ಮಾರ್ಗದರ್ಶನದಲ್ಲಿ ನೆರವೇರಲಿವೆ.

ಭಕ್ತಾದಿಗಳೆಲ್ಲರೂ ಈ ಪೂಜಾ ಮಹೋತ್ಸವಗಳಲ್ಲಿ ಭಾಗವಹಿಸಿ, ಭಗವಾನ್ ಶ್ರೀ ಪಾರ್ಶ್ವನಾಥ ಸ್ವಾಮಿಯ ಅನನ್ಯ ಕೃಪೆಗೂ, ಮಹಾಮಾತೆ ಶ್ರೀ ಪದ್ಮಾವತಿ ಅಮ್ಮನವರ ದಿವ್ಯಾನುಗ್ರಹಕ್ಕೂ ಪಾತ್ರರಾಗಬೇಕಾಗಿ ಅಪೇಕ್ಷಿಸುತ್ತೇವೆ.

ವಿ.ಸೂ. : ದಕ್ಷಿಣ ಕನ್ನಡ ಜಿಲ್ಲೆಯವರಿಗಾಗಿ
ಸೋಣ ಶುಕ್ರವಾರದ ಪೂಜೆಗಳು
ದಿ. 19–08–2022, 26–08–2022, 02–09–2022, 09–09–2022 ಮತ್ತು 16–09–2022 ರಂದು ನೆರವೇರಲಿವೆ.

ಸೂಚನೆ :

- 8.00 ಗಂಟೆಗೆ ಮಹಾಭಿಷೇಕ, 10–30 ಗಂಟೆಗೆ ಮಹಾಮಂಗಳಾರತಿ ನೆರವೇರುವುದು.
- ಭಕ್ತಾದಿಗಳು ಶ್ರಾವಣ ಮಾಸದ ವಿಶೇಷ ಪೂಜೆಗಳಿಗಾಗಿ ಕಾಣಿಕೆ, ಧನ, ಧಾನ್ಯಗಳನ್ನು ಶ್ರೀಮಠಕ್ಕೆ ಕಳುಹಿಸಬಹುದು. ಚತುರ್ವಿಧ ದಾನ–ಧರ್ಮಾದಿ ವಿನಿಯೋಗಗಳಿಗಾಗಿ ಉದಾರ ನಗದು ದಾನವನ್ನು "SHRI HOMBUJA JAIN MATH" ಹೆಸರಿಗೆ ಎಂ.ಓ./ ಬ್ಯಾಂಕ್‌ಚೆಕ್/ ಡಿ.ಡಿ./ NEFT /RTGS ಮೂಲಕ ಕಳುಹಿಸಬಹುದು. NEFT /RTGS ಗಾಗಿ ವಿವರ : SRI HOMBUJA JAIN MATH, S.B. A/c No : 3182500101025001 with Karnataka Bank, Humcha Br. IFSC Code : KARB0000318.
- ರಶೀದಿ ಮತ್ತು ಪ್ರಸಾದವನ್ನು ಅಂಚೆ ಮೂಲಕ ಕಳುಹಿಸಿಕೊಡಲಾಗುವುದು

ಗುರುದೇವ
GURUDEVA MONTHLY
RNI No. 13248/57-POSTEL REGD No. KA/SK/SMG 198/2021-23
Date of Posting 17th of every month. Sub Post office, Humcha - 577436
ವಾರ್ಷಿಕ ಚಂದಾ : ರೂಪ್ಯಾ 150–00 ಮತ್ತು ಆಜೀವ ಸದಸ್ಯತ್ವಕ್ಕೆ : ರೂಪ್ಯಾ 1000–00 ಮಾತ್ರ.
ವ್ಯವಸ್ಥಾಪಕರು, "ಗುರುದೇವ" ಕಾರ್ಯಾಲಯ, ಅಂಚೆ : ಹೊಂಬುಜ, ಶಿವಮೊಗ್ಗ–ಜಿಲ್ಲೆ, ಕರ್ನಾಟಕ–೫೭೭೪೩೬

Edited, Published & Printed by Sri Sudir A. Kusanale,on behalf of Swasthishree Devendrakeerthi Bhattaraka Pattacharyavarya Swamiji, Sri Hombuja Jain Math
Printed at Sri Mahaveer Printing Press, J.P.N. Road, Durgigudi, Shimoga (Ph: 08182- 222044) and Published at Gurudeva Karyalaya Sri Hombuja Jain Math
Post: Humcha, Tq. Hosanagar., Dist. Shimoga-577436 Ph : 08185-262722, 262209